# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ , ಕಾರವಾರ

ಸಿ.ಸಿ. ನಂಃ 731/2024 ಪಿ.ಡಬ್ಲ್ಯೂಃ 1

ಸಿಡಬ್ಲೂಃ 2

ಸಾಕ್ಷಿದಾರರ ಹೆಸರು : ಸಂಜಯ ಎಸ್ ನಾಗೇಕರ
ತಂದೆಯ ಹೆಸರು : ಶಿವಾಜಿ ನಾಗೇಕರ
ವಯಸ್ಸು : 59 ವರ್ಷ
ಉದ್ಯೋಗ : ಅಬಕಾರಿ ಮುಖ್ಯ ಪೇದೆ , ಕಾರವಾರ ವಲಯ
ವಾಸ್ತವ್ಯ : ಕಾರವಾರ .

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 27-06-2025.

## ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ

ನಾನು ಏಪ್ರಿಲ್ 2011 ರಿಂದ ಫೆಬ್ರುವರಿ 2024 ರವರೆಗೆ ನಾನು ಮಾಜಾಳಿ ತನಿಖಾ ಠಾಣೆಯಲ್ಲಿ ಅಬಕಾರಿ ಪೇದೆ ಎಂದು ಕೆಲಸ ನಿರ್ವಹಿಸಿದ್ದೇನೆ.

ಸಾರ್ವತ್ರಿಕ ಲೋಕಸಭಾ ಚುನಾವಣೆ 2024 ರ ನಿಮಿತ್ತ ನೀತಿ ಸಂಹಿತೆ ಜಾರಿಯಲ್ಲಿದ್ದುದರಿಂದ ಅಕ್ರಮ ಚಟುವಟಿಕೆಗಳನ್ನು ಪತ್ತೆ ಹಚ್ಚುವ ಸಂಬಂಧ ದಿನಾಂಕಃ 22.04.2024 ರಂದು ಸಂಜೆ 4.30 ಗಂಟೆ ಸುಮಾರಿಗೆ ನಮ್ಮ ಮೇಲಾಧಿಕಾರಿಗಳಾದ ಚಾಸಾ.1 ಹಾಗೂ ಸಿಬ್ಬಂದಿಯಾದ ಚಾಸಾ.3 ರವರೊಂದಿಗೆ ಕಾರವಾರ ವಲಯ ವ್ಯಾಪ್ತಿಯ ಬೈತಕೋಲ ಹತ್ತಿರ ರಸ್ತೆಗಸ್ತು ಮಾಡುತ್ತಿರುವಾಗ ಚಾಸಾ.1 ರವರಿಗೆ ಚೆಂಡಿಯಾ ಗ್ರಾಮದ ಬ್ಯಾಕವಾಟರ ಅರಣ್ಯ ಪ್ರದೇಶದಲ್ಲಿ ಓರ್ವ ವಿಠು ರಾಮಾ ಸಾತರಕರ ಎನ್ನುವ ವ್ಯಕ್ತಿಯು ಅಕ್ರಮವಾಗಿ ಗೋವಾ ರಾಜ್ಯದ ಸರಾಯಿಯನ್ನು ಸಂಗ್ರಹಿಸಿಟ್ಟು , ಮಾರಾಟ ಮಾಡುವ ಸಲುವಾಗಿ ಬೇರೆ ಕಡೆಗೆ ಸಾಗಾಣಿಕೆ ಮಾಡುತ್ತಿದ್ದಾನೆಂದು ಖಚಿತ ಬಾತ್ಮಿ ಬಂದಿದ್ದು , ನಂತರ ನಾವು ಘಟನಾ ಸ್ಥಳಕ್ಕೆ ತೆರಳಿ ನೋಡಿದಾಗ ಅಲ್ಲಿ ಇದ್ದ ಆರೋಪಿತನು ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿದವನೇ ಓಡಿ ಹೋಗಿರುತ್ತಾನೆ. ಆತನನ್ನು ಬೆನ್ನಟ್ಟಿ ಹಿಡಿಯಲು ಪ್ರಯತ್ನಿಸಿದರೂ ಸಹ ಆತನು ಸಿಕ್ಕಿರುವುದಿಲ್ಲಾ. ನ್ಯಾಯಾಲಯದಿಂದ ಸರ್ಚ ವಾರಂಟ ಪಡೆಯಲು ಕಾಲಾವಕಾಶ ಇಲ್ಲದಿದ್ದುದರಿಂದ ಚಾಸಾ.1 ರವರು ಸ್ಥಳದಲ್ಲೇ ಮೇಲಾಧಿಕಾರಿಗಳ ಅನುಮತಿಯನ್ನು ಪಡೆದು ಸರ್ಚ ವಾರಂಟ ತಯಾರಿಸಿದ್ದು , ಸ್ಥಳೀಕರನ್ನು ಪಂಚರನ್ನಾಗಿ ಸಹಕರಿಸಲು ಕೇಳಿಕೊಂಡಿದ್ದು , ಅವರು ಯಾರೂ ಮುಂದೆ ಬಾರದೇ ಇದ್ದುದರಿಂದ ನನ್ನನ್ನು ಮತ್ತು ಚಾಸಾ.3 ರವರನ್ನು ಪಂಚರಾಗುವಂತೆ ಚಾಸಾ.1 ರವರು

ಸೂಚಿಸಿದ್ದು , ಅದಕ್ಕೆ ನಾವು ಒಪ್ಪಿದ್ದು , ನಂತರ ಘಟನಾ ಸ್ಥಳದಲ್ಲಿ ನಮ್ಮ ಸಮಕ್ಷಮ ಆರೋಪಿತನು ಬಿಟ್ಟು ಹೋಗಿದ್ದ ಚೀಲವನ್ನು ಪರಿಶೀಲಿಸಿದಾಗ 1 ನೇ ಚೀಲದಲ್ಲಿ 750 ಎಂ ಎಲ್ ಅಳತೆಯ ಲೈಟಹಾರ್ಸ ವಿಸ್ಕಿ 36 ಬಾಟಲುಗಳು, 2 ನೇ ಚೀಲದಲ್ಲಿ 180 ಎಂ ಎಲ್ ಅಳತೆಯ ಗೋವಾ ಪಾಮ ಫೆನ್ನಿ 100 ಬಾಟಲುಗಳು ಇರುವುದು ಕಂಡು ಬಂದಿತು.

ರಾಸಾಯನಿಕ ಪರೀಕ್ಷೆಗಾಗಿ 750 ಎಂ ಎಲ್ ಅಳತೆಯ ಲೈಟಹಾರ್ಸ ವಿಸ್ಕಿ 1 ಬಾಟಲು ಹಾಗೂ 180 ಎಂ ಎಲ್ ಅಳತೆಯ 4 ಪಾಮ ಫೆನ್ನಿ ಬಾಟಲುಗಳನ್ನು ಕಾಯ್ದಿರಿಸಿ ಅವುಗಳನ್ನು ಬಿಳಿ ಬಟ್ಟೆಯಿಂದ ಸುತ್ತಿ ಇಲಾಖಾ ಅರಗು ಹಾಕಿ ಚಾಸಾ.1 ರವರ ಹಾಗೂ ಪಂಚರಾದ ನಮ್ಮ ಸಹಿವುಳ್ಳ ಚೀಟಿಯನ್ನು ಅಂಟಿಸಲಾಯಿತು. ಪಂಚನಾವೆಯನ್ನು ಸ್ಥಳದಲ್ಲಿ ಸಂಜೆ 5.40 ರಿಂದ 6.40 ಗಂಟೆಯ ನಡುವಿನ ಅವಧಿಯಲ್ಲಿ ತಯಾರಿಸಲಾಯಿತು. ನಂತರ ಅಬಕಾರಿ ಸ್ವತ್ತುಗಳನ್ನು ವಶಕ್ಕೆ ಪಡೆದುಕೊಂಡು ಠಾಣೆಗೆ ಬಂದು ಚಾಸಾ.1 ರವರು ಆರೋಪಿತನ ವಿರುದ್ಧ ಸರಕಾರದ ಪರವಾಗಿ ದೂರನ್ನು ದಾಖಲಿಸಿ ಪ್ರ.ವ.ವರದಿ ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತಾರೆ. ನಾನು ಈ ಬಗ್ಗೆ ತನಿಖಾಧಿಕಾರಿಯವರಿಗೆ ಹೇಳಿಕೆ ನೀಡಿರುತ್ತೇನೆ.

ಪಂಚನಾಮೆ ಹಾಗೂ ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದರಿಂದ ಅವುಗಳನ್ನು ನಿಪಿ.1 ಮತ್ತು ನಿಪಿ.1(ಎ) ಎಂದು ಗುರುತಿಸಲಾಯಿತು. ಮಾದರಿ ಸೀಲು ಹಾಗೂ ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ನಿಪಿ.2 ಮತ್ತು ನಿಪಿ.2(ಎ) ಎಂದು ಗುರುತಿಸಲಾಯಿತು. ಶೋಧನಾ ಸಮ್ಮುಚಿತ ವಾರಂಟ ಹಾಗೂ ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ನಿಪಿ.3 ಮತ್ತು ನಿಪಿ.3(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಮು ಮಾ ಗಳನ್ನು ನೋಡಿ ಗುರುತಿಸಿದ್ದು , ಅವುಗಳನ್ನು ಕ್ರಮವಾಗಿ ಮು ಮಾ 1 ರಿಂದ 5 ಎಂದು ಗುರುತಿಸಲಾಯಿತು. ಮು ಮಾ ಗಳಿಗೆ ಅಂಟಿಸಿದ ಚೀಟಿಯಲ್ಲಿ ಸಾಕ್ಷಿಯು ತನ್ನ ಸಹಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ಮು ಮಾ.1(ಎ) ರಿಂದ 5(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತನನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಶ್ರೀ ಸಿ ಡಿ ಎನ್ ಆರೋಪಿ ಪರ ವಕೀಲರಿಂದ**

ಚಾಸಾ.1 ನನ್ನ ಮೇಲಾಧಿಕಾರಿ ಎಂದರೆ ಸರಿ. ಈ ಪ್ರಕರಣದಲ್ಲಿ ಎಲ್ಲಾ ಸಾಕ್ಷಿದಾರರು ನಮ್ಮ ಇಲಾಖೆಯವರು ಎಂದರೆಸರಿ. ಘಟನಾ ಸ್ಥಳವು ಸಾಮಾನ್ಯವಾಗಿ ಜನರು ಓಡಾಡುವ ಸ್ಥಳ ಎಂದರೆ ಸರಿ. ಸಾಕ್ಷಿ ಸ್ವತಃ ಆಜುಬಾಜು ಕೇವಲ 3 – 4 ಮನೆಗಳಿರುತ್ತವೆಂದು ಸಾಕ್ಷ್ಯ ನುಡಿಯುತ್ತಾರೆ. ಯಾವ

ಸ್ಥಳೀಕರನ್ನು ಚಾಸಾ.1 ರವರು ಪಂಚರಾಗಿ ಸಹಕರಿಸಲು ಕೇಳಿರುತ್ತಾರೋ ಅವರ ಹೆಸರು ನನಗೆ ಗೊತ್ತಿರುವುದಿಲ್ಲಾ. ಚಾಸಾ.1 ರವರಿಗೆ ಮಾಹಿತಿ ಬಂದಾಗ ಸಮಯ 4.30 ಆಗಿದ್ದು , ಆ ಸಮಯದಲ್ಲಿ ನಾವು ಬೈತಕೋಲ ಅಂದರೆ ನ್ಯಾಯಾಲಯದಿಂದ 2 ವರೆ ಕಿಮೀ ಅಂದರೆ ನಮ್ಮ ಇಲಾಖಾ ಜೀಪನಲ್ಲಿ 5 ನಿಮಿಷದಲ್ಲಿ ಕ್ರಮಿಸಬಹುದಾದಷ್ಟು ದೂರದಲ್ಲಿ ಇದ್ದೆವು ಎಂದರೆ ಸರಿ. ಸದರಿ ಘಟನಾ ಸ್ಥಳಕ್ಕೆ ನಾವು ಬೈತಕೋಲನಿಂದ 4.30 ಕ್ಕೆ ತೆರಳಿರುತ್ತೇವೆ. ಬೈತಕೋಲನಿಂದ ಘಟನಾ ಸ್ಥಳವು 5 ರಿಂದ 10 ನಿಮಿಷದಲ್ಲಿ ತಲುಪುವಷ್ಟ ದೂರದಲ್ಲಿ ಇತ್ತು. ಬಾತ್ಮಿ ಬಂದಾಗ ನ್ಯಾಯಾಲಯಕ್ಕೆ ಬಂದು ಸರ್ಚ ವಾರಂಟನ್ನು ಪಡೆಯಲು ಯಾವುದೇ ತೊಂದರೆ ಇರಲಿಲ್ಲಾ. ಚಾಸಾ.1 ರವರು ನೀಡಿದ ದೂರನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ.

ನಾನು ಆಧರಿಸುವಂತೆ ಆರೋಪಿತನು ಯಾವತ್ತೂ ಗೋವಾ ರಾಜ್ಯದ ಮದ್ಯಗಳನ್ನು ದಾಸ್ತಾನು ಮಾಡಿರುವುದಿಲ್ಲಾ , ಆರೋಪಿತನಿಗೂ, ಪ್ರಕರಣಕ್ಕೂ ಹಾಗೂ ಮು ಮಾ ಗಳಿಗೂ ಯಾವುದೇ ಸಂಬಂಧ ಇಲ್ಲಾ ಎಂದರೆ ಸರಿಯಲ್ಲ. ಚಾಸಾ.1 ರವರಿಗೆ ಯಾವುದೇ ಬಾತ್ಮಿ ಬಂದಿರುವುದಿಲ್ಲಾ , ಆ ದಿವಸ ಯಾವುದೇ ಗಸ್ತು ಕಾರ್ಯದಲ್ಲಿ ನಾವು ಇರಲಿಲ್ಲಾ , ನಮ್ಮ ಸಮಕ್ಷಮ ಯಾವುದೇ ಅಬಕಾರಿ ಸ್ವತ್ತುಗಳನ್ನು ಜಪ್ತುಪಡಿಸಿರುವುದಿಲ್ಲಾ, ಪಂಚನಾಮೆ , ಮಾದರಿ ಸೀಲು ನಮೂನೆ , ಸರ್ಚ ವಾರಂಟನ್ನು ಘಟನಾ ಸ್ಥಳದಲ್ಲಿ ತಯಾರಿಸಿರುವುದಿಲ್ಲಾ ಎಂದರೆ ಸರಿಯಲ್ಲ. ಚಾಸಾ.1 ರವರು ಸರಕಾರಕ್ಕೆ ಅಂಕಿಅಂಶ ತೋರಿಸುವ ಸಲುವಾಗಿ ಆರೋಪಿತನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದು , ಅದಕ್ಕೆ ಪೂರಕವಾಗಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ – ಇಲ್ಲಾ –**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಿಸಲಾಯಿತು).**

**ಓ. ಹೇ.ಕೇ. ಸರಿ ಇದೆ.**

**ಪ್ರ.ದ.ನ್ಯಾದಂ. ಕಾರವಾರ**